# All India Radio: Bangalore
# National Bulletins In Kannada
# 01.08.2025 / 7.35am

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><*<><>*><>**

ಮುಖ್ಯಾಂಶಗಳು :

೧. ದೇಶಾದ್ಯಂತ ಆಹಾರ ನಿರ್ವಹಣಾ ಘಟಕ ಹಾಗೂ ಆಹಾರ ಪರೀಕ್ಷಾ ಪ್ರಯೋಗಾಲಯಗಳ ಸ್ಥಾಪನೆಗೆ ಒಂದು ಸಾವಿರ ಕೋಟಿ ರೂಪಾಯಿ ಅನುಮೋದಿಸಿದ ಕೇಂದ್ರ ಸಚಿವ ಸಂಪುಟ

೨. ಬಿಹಾರದಲ್ಲಿಂದು ಚುನಾವಣಾ ಆಯೋಗದಿಂದ ಮತದಾರರ ತಾತ್ಕಾಲಿಕ ಪಟ್ಟಿ ಬಿಡುಗಡೆ

೩. ಭಾರತದ ಆಮದುಗಳ ಮೇಲೆ ಟ್ರಂಪ್ ವಿಧಿಸಿರುವ ಶೇಕಡ ೨೫ ರಷ್ಟು ಸುಂಕ ಇಂದಿನಿಂದ ಜಾರಿಗೆ

೪. ಕಾಂಡ್ಲಾ ಬಂದರಿನಲ್ಲಿ ಭಾರತ ನಿರ್ಮಿತ ಹಸಿರು ಹೈಡ್ರೋಜನ್ ವಿದ್ಯುತ್ ಸ್ಥಾವರ ಆರಂಭ

೫. ೧೭ ವರ್ಷದವರೊಳಗಿನವರ ವಿಶ್ವ ಕುಸ್ತಿ ಚಾಂಪಿಯನ್ ಶಿಪ್ - ೨ ಚಿನ್ನ, ೨ ಬೆಳ್ಳಿ, ೧ ಕಂಚಿನೊಂದಿಗೆ ಭಾರತಕ್ಕ ಒಟ್ಟು ೫ ಪದಕ

><><><><>***<><><><><

ಪ್ರಧಾನ ಮಂತ್ರಿ ಕಿಸಾನ್ ಸಂಪದ ಯೋಜನೆಯನ್ನು ೧೫ನೇ ಹಣಕಾಸು ಆಯೋಗದ ಆವರ್ತ ಅವಧಿಯಲ್ಲಿ ಒಟ್ಟು ೬ ಸಾವಿರದ ೫೨೦ ಕೋಟಿ ರೂಪಾಯಿ ವೆಚ್ಚದಲ್ಲಿ ಜಾರಿಗೊಳಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಸದ್ಯ ಅನುಷ್ಠಾನದಲ್ಲಿರುವ ಈ ಕೇಂದ್ರೀಯ ವಲಯ ಯೋಜನೆಯ ಹೆಚ್ಚುವರಿ ಯೋಜನಾ ಗಾತ್ರ ೧ ಸಾವಿರದ ೯೨೦ ಕೋಟಿ ರೂಪಾಯಿಯನ್ನು ಇದು ಒಳಗೊಂಡಿದೆ. ನವದೆಹಲಿಯಲ್ಲಿ ನಿನ್ನೆ ಸುದ್ದಿಗಾರರಿಗೆ ಮಾಹಿತಿ ನೀಡಿದ, ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ಸಮಗ್ರ ಶೈತ್ಯ ಸರಣಿ ಮತ್ತು ಮೌಲ್ಯ ವರ್ಧನೆ ಮೂಲಸೌಕರ್ಯ ಒದಗಿಸುವ ಯೋಜನೆಯಡಿ ೫೦ ವಿವಿಧ ಉತ್ಪನ್ನ ಆಹಾರ ನಿರ್ವಹಣಾ ಘಟಕ ಗಳ ಸ್ಥಾಪನೆಗೆ ಒಂದು ಸಾವಿರ ಕೋಟಿ ರೂಪಾಯಿ ಒದಗಿಸಲಾಗಿದೆ. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಖಾತರಿ ಮೂಲಸೌಕರ್ಯ ಯೋಜನೆಯಡಿ ನೂರು ಆಹಾರ ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುತ್ತದೆ. ಇದಲ್ಲದೆ, ೧೫ನೇ ಹಣಕಾಸು ಆಯೋಗದ ಆವರ್ತ ಅವಧಿಯಲ್ಲಿ ಪ್ರಧಾನಮಂತ್ರಿ ಕಿಸಾನ್ ಸಂಪದ ಯೋಜನೆಯ ಇತರ ಉಪಕ್ರಮದಡಿ ೯೨೦ ಕೋಟಿ ರೂಪಾಯಿ ವೆಚ್ಚ ಮಾಡುವ ಪ್ರಸ್ತಾಪವನ್ನು ಇದು ಒಳಗೊಂಡಿದೆ ಎಂದರು.

ಧ್ವನಿ - ಅಶ್ವಿನಿ ವೈಷ್ಣವ್ (೨೪ ಸೆಕೆಂಡುಗಳು)

ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮಕ್ಕೆ ೨೦೨೫-೨೬ ರಿಂದ ೨೦೨೮-೨೯ರವರೆಗೆ ಒಟ್ಟು ೪ ವರ್ಷಗಳ ಅವಧಿಗೆ ೨ ಸಾವಿರ ಕೋಟಿ ರೂಪಾಯಿ ಅನುದಾನ ಸಹಾಯ ಒದಗಿಸುವ ಪ್ರಸ್ತಾಪಕ್ಕೂ ಸಚಿವ ಸಂಪುಟ ಅನುಮೋದನೆ ನೀಡಿದೆ.

ಈ ಅನುದಾನ ಸಹಾಯದಿಂದ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ಮುಕ್ತ ಮಾರುಕಟ್ಟೆಯಿಂದ ೨೦ ಸಾವಿರ ಕೋಟಿ ರೂಪಾಯಿ ಎತ್ತುವಳಿ ಮಾಡಲು ನೆರವಾಗಲಿದೆ. ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ, ಈ ನಿಧಿಯಿಂದ ಸಹಕಾರಿ ಸಂಸ್ಥೆಗಳಿಗೆ ಹೊಸ ಯೋಜನೆ ಕೈಗೊಳ್ಳಲು ಹಾಗೂ ಕಾರ್ಯ ಬಂಡವಾಳ ಅಗತ್ಯ ಪೂರೈಸಲು ಸಾಲ ನೆರವು ಒದಗಿಸಲಿದೆ. ಆರ್ಥಿಕ ವ್ಯವಹಾರ ಕುರಿತ ಸಚಿವ ಸಂಪುಟ ಸಮಿತಿ ಮಹಾರಾಷ್ಟ್ರ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಬಿಹಾರ, ಒಡಿಶಾ ಮತ್ತು ಜಾರ್ಖಂಡ್ ರಾಜ್ಯಗಳ ೧೩ ಜಿಲ್ಲೆಗಳಲ್ಲಿ ರೈಲ್ವೆ ಜಾಲ ವಿಸ್ತರಿಸಲು ಅನುಮತಿ ನೀಡಿದೆ. ಒಟ್ಟು ೫೭೪ ಕಿಲೋಮೀಟರ್ ಉದ್ದದ ರೈಲ್ವೆ ಯೋಜನೆಗಾಗಿ ೧೧ ಸಾವಿರದ ೧೬೯ ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತಿದ್ದು, ಇದನ್ನು ೨೦೨೯ರ ವೇಳೆಗೆ ಪೂರ್ತಿಗೊಳಿಸಲಾಗುವುದು. ಈ ಯೋಜನೆಯಿಂದ ಸುಮಾರು ೨೨೯ ಲಕ್ಷ ಮಾನವ ದಿನಗಳ ಉದ್ಯೋಗ ಸೃಷ್ಟಿಯಾಗಲಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

><><><><***<><><><><

ಬಿಹಾರ ರಾಜ್ಯದಲ್ಲಿ ವಿಶೇಷ ಮತದಾರರಪಟ್ಟಿ ಪರಿಷ್ಕರಣೆ ಅಭಿಯಾನದಡಿಯಲ್ಲಿ, ಚುನಾವಣಾ ಆಯೋಗವು ಇಂದು ಮತದಾರರ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಲು ಸಜ್ಜಾಗಿದೆ. ಈ ಕುರಿತು ಮಾತನಾಡಿರುವ, ಮುಖ್ಯ ಚುನಾವಣಾ ಆಯುಕ್ತ ಗ್ಯಾನೇಶ್ ಕುಮಾರ್, ಬಿಹಾರದ ಎಲ್ಲ ೩೮ ಜಿಲ್ಲೆಗಳ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ಜಿಲ್ಲಾ ಚುನಾವಣಾಧಿಕಾರಿಗಳು ಮತದಾರರ ಪಟ್ಟಿಯ ಭೌತಿಕ ಹಾಗೂ ಡಿಜಿಟಲ್ ಪ್ರತಿಯನ್ನು ವಿತರಿಸಲಿದ್ದಾರೆ ಎಂದು ತಿಳಿಸಿದ್ದಾರೆ. ಬಿಹಾರದ ಪ್ರಧಾನ ಚುನಾವಣಾಧಿಕಾರಿ ಹಾಗೂ ೨೪೩ ಕ್ಷೇತ್ರಗಳ ಚುನಾವಣಾಧಿಕಾರಿಗಳು, ಮತದಾರರು ಅಥವಾ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಮತದಾರರ ಪಟ್ಟಿಯಲ್ಲಿನ ಯಾವುದೇ ತೊಂದರೆಗಳ ಬಗ್ಗೆ ತಾವು ಸಲ್ಲಿಸಬಹುದಾದ ಆಕ್ಷೇಪಣೆಗಳನ್ನು ಸ್ವೀಕರಿಸಲು ಆಹ್ವಾನಿಸಲಿದ್ದಾರೆ. ಈ ಆಕ್ಷೇಪಣೆಗಳನ್ನು ಇಂದಿನಿಂದ ಸೆಪ್ಟೆಂಬರ್ ೧ರವರೆಗೆ ಸಲ್ಲಿಸಬಹುದು. ಚುನಾವಣಾ ಆಯೋಗವು ಜೂನ್ ೨೪ರಂದು ಬಿಹಾರದಲ್ಲಿ ಈ ಅಭಿಯಾನ ನಡೆಸುವ ಕುರಿತು ನಿರ್ದೇಶನಗಳನ್ನು ಹೊರಡಿಸಿತ್ತು. ಈ ಅಭಿಯಾನದ ಉದ್ದೇಶ, ಅರ್ಹ ಮತದಾರರ ಹೆಸರುಗಳನ್ನು ಪಾರದರ್ಶಕವಾಗಿ ಮತದಾರರ ಪಟ್ಟಿಯಲ್ಲಿ ಸೇರಿಸುವುದಾಗಿದೆ. ಬಿಹಾರದಲ್ಲಿ ಕೊನೆಯ ತೀವ್ರ ಪರಿಶೀಲನೆ ೨೦೦೩ರಲ್ಲಿ ನಡೆಯಿತ್ತು. ಮತದಾರರು ತಮ್ಮ ವಿವರಗಳನ್ನು ಪರಿಶೀಲಿಸಲು **voters.eci.gov.in** ಜಾಲತಾಣಕ್ಕೆ ಭೇಟಿ ನೀಡಬಹುದಾಗಿದೆ.

><><><><***<><><><><

ಕಳೆದ ವರ್ಷ ನಡೆದ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ವಿವಿ ಪ್ಯಾಟ್ ಮತಪತ್ರಗಳ ಎಣಿಕೆಯಲ್ಲಿ ಯಾವುದೇ ಭಿನ್ನತೆ ಕಂಡುಬಂದಿಲ್ಲ ಎಂದು ಚುನಾವಣಾ ಆಯೋಗ ತಿಳಿಸಿದೆ. ೧೦ ಅಭ್ಯರ್ಥಿಗಳಿಂದ ಬಂದ ಅರ್ಜಿಗಳ ಆಧಾರದಲ್ಲಿ ೧೦ ವಿಧಾನಸಭಾ ಕ್ಷೇತ್ರಗಳಲ್ಲಿ ಇವಿಎಂಗಳ ಪರಿಶೀಲನೆ ಮತ್ತು ದೃಢೀಕರಣ ನಡೆಯಿತು. ಎಲ್ಲಾ ಯಂತ್ರಗಳ ತಾಂತ್ರಿಕ ಪರೀಕ್ಷೆ ನಡೆಸಲಾಗಿದ್ದು ಯಾವುದೇ ಲೋಪದೋಷ ಕಂಡುಬಂದಿಲ್ಲ. ೪೮ ಬ್ಯಾಲೆಟ್ ಘಟಕಗಳು, ೩೧ ನಿಯಂತ್ರಣ ಘಟಕಗಳು ಮತ್ತು ೩೧ ವಿವಿ ಪ್ಯಾಟ್ ಪರಿಶೀಲನೆ ೮ ಅಭ್ಯರ್ಥಿಗಳ ಉಪಸ್ಥಿತಿಯಲ್ಲಿ ಯಶಸ್ವಿಯಾಗಿ ನೆರವೇರಿತು.

><><><><***<><><><><

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿರುವ ಭಾರತೀಯ ಆಮದುಗಳ ಮೇಲಿನ ಶೇ. ೨೫ ರಷ್ಟು ಸುಂಕವು ಇಂದಿನಿಂದ ಅಧಿಕೃತವಾಗಿ ಜಾರಿಗೆ ಬರಲಿದೆ. ವಿಶೇಷವಾಗಿ ಉಕ್ರೇನ್‌ನಲ್ಲಿ ನಡೆಯುತ್ತಿರುವ ಯುದ್ಧದ ನಡುವೆ, ಭಾರತವು ಅತಿಯಾಗಿ ಹೆಚ್ಚಿನ ವ್ಯಾಪಾರ ಅಡೆತಡೆಗಳನ್ನು ಕಾಯ್ದುಕೊಳ್ಳುತ್ತಿದೆ ಮತ್ತು ರಷ್ಯ ದೊಂದಿಗೆ ತನ್ನ ಮಿಲಿಟರಿ ಮತ್ತು ಇಂಧನ ಸಂಬಂಧಗಳನ್ನು ಮುಂದುವರೆಸುತ್ತಿದೆ ಎಂದು ಆರೋಪಿಸುವ ಮೂಲಕ ಟ್ರಂಪ್ ಸುಂಕವನ್ನು ಸಮರ್ಥಿಸಿಕೊಂಡಿದ್ದಾರೆ. ಗಮನಾರ್ಹವಾಗಿ, ಶೇಕಡಾ ೨೫ ರಷ್ಟು ಸುಂಕ ಭಾರತದಿಂದ ಸ್ಮಾರ್ಟ್‌ಫೋನ್ ರಫ್ತಿಗೆ ಇನ್ನೂ ಅನ್ವಯಿಸುವುದಿಲ್ಲ. ಈ ವಸ್ತುಗಳನ್ನು ಪ್ರಸ್ತುತ ಅಮೇರಿಕ ವ್ಯಾಪಾರ ಕಾನೂನಿನ ಸೆಕ್ಷನ್ ೨೩೨ ರ ಅಡಿಯಲ್ಲಿ ವಿನಾಯಿತಿ ನೀಡಲಾಗಿದೆ. ಈ ವಿನಾಯಿತಿಗೆ ಸಂಬಂಧಿಸಿದ ಪರಿಶೀಲನಾ ಸಭೆ ಎರಡು ವಾರಗಳಲ್ಲಿ ನಡೆಯಲಿದ್ದು, ನಂತರ ಸ್ಮಾರ್ಟ್‌ಫೋನ್ ಸುಂಕಗಳ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುತ್ತದೆ.

><><><><>***<><><><><

ಭಾರತದಲ್ಲಿ ೬೦ ಬಿಲಿಯನ್ ಡಾಲರ್ ಮಾರುಕಟ್ಟೆ ನಷ್ಟವಾದ ನಂತರ ಹಣಕಾಸು ತುರ್ತು ಪರಿಸ್ಥಿತಿ ಘೋಷಿಸಲಾಗಿದೆ ಎಂಬ ಪಾಕಿಸ್ತಾನ ಮೂಲದ ಸಾಮಾಜಿಕ ಮಾಧ್ಯಮ ಖಾತೆಯ ಹೇಳಿಕೆಯನ್ನು ಕೇಂದ್ರ ಸರ್ಕಾರ ಖಂಡಿಸಿದೆ. ಪಿಐಬಿಯ ಫ್ಯಾಕ್ಟ್ ಚೆಕ್ ಘಟಕ ಈ ಘೋಷಣೆಯನ್ನು ನಕಲಿ ಎಂದು ತಳ್ಳಿ ಹಾಕಿದ್ದು, ಭಾರತದಲ್ಲಿ ಯಾವುದೇ ಹಣಕಾಸು ತುರ್ತು ಪರಿಸ್ಥಿತಿಯ ಘೋಷಣೆಯಾಗಿಲ್ಲ ಎಂದು ಸ್ಪಷ್ಟಪಡಿಸಿದೆ. ಜನತೆ ಎಚ್ಚರಿಕೆಯಿಂದ ಇರಬೇಕು ಹಾಗೂ ಅಧಿಕೃತ ಮೂಲಗಳಿಂದ ಮಾತ್ರ ಮಾಹಿತಿ ಪಡೆಯಬೇಕು ಎಂದು ಸಲಹೆ ನೀಡಿದೆ.

><><><><>***<><><><><

ಗುಜರಾತ್‌ನ ಕಾಂಡ್ಲಾದ ದೀನದಯಾಳ್ ಬಂದರು ಪ್ರಾಧಿಕಾರದಲ್ಲಿ ನಿನ್ನೆ ಸ್ಥಳೀಯವಾಗಿ ನಿರ್ಮಿತ ೧ ಮೆಗಾವ್ಯಾಟ್ ಹಸಿರು ಹೈಡ್ರೋಜನ್ ವಿದ್ಯುತ್ ಸ್ಥಾವರವನ್ನು ಕೇಂದ್ರ ಬಂದರುಗಳು, ಹಡಗು ಮತ್ತು ಜಲಮಾರ್ಗ ಸಚಿವ ಸರ್ಬಾನಂದ ಸೋನೋವಾಲ್ ಉದ್ಘಾಟಿಸಿದರು. ಈ ಸ್ಥಾವರವು ವಾರ್ಷಿಕವಾಗಿ ಸುಮಾರು ೧೪೦ ಮೆಟ್ರಿಕ್ ಟನ್ ಹಸಿರು ಹೈಡ್ರೋಜನ್ ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ ಮತ್ತು ಸಮುದ್ರ ನಿರ್ಮೂಲನೆ ಮತ್ತು ಸುಸ್ಥಿರ ಬಂದರು ಕಾರ್ಯಾಚರಣೆಗಳಲ್ಲಿ ನಿರ್ಣಾಯಕ ಪಾತ್ರ ವಹಿಸಲು ಸಿದ್ಧವಾಗಿದೆ. ಸಂಪೂರ್ಣವಾಗಿ ಭಾರತೀಯ ಎಂಜಿನಿಯರ್‌ಗಳಿಂದ ನಿರ್ಮಿಸಲಾದ ಸಂಪೂರ್ಣ ಆತ್ಮನಿರ್ಭರ, ಭವಿಷ್ಯ ಕ್ಕೆ ಸಿದ್ಧವಾದ ಹೈಡ್ರೋಜನ್ ಪರಿಸರ ವ್ಯವಸ್ಥೆಯ ಸ್ಥಾಪನೆಯನ್ನು ಸಚಿವರು ಶ್ಲಾಘಿಸಿದರು ಮತ್ತು ದೇಶಾದ್ಯಂತ ಬಂದರುಗಳು ಪರಿಸರ ಸ್ನೇಹಿ ಮತ್ತು ನವೀನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಇದು ಸ್ಫೂರ್ತಿ ಎಂದು ಹೇಳಿದರು. ಬಂದರಿನಲ್ಲಿ ಕಾರ್ಯಾಚರಣೆಗಾಗಿ ಭಾರತದ ಮೊದಲ ಮೇಡ್-ಇಂಡಿಯಾ ಆಲ್-ಎಲೆಕ್ಟ್ರಿಕ್ ಗ್ರೀನ್ ಟಗ್ ಅನ್ನು ಮೊದಲೇ ನಿಯೋಜಿಸಿದ್ದನ್ನು ಉಲ್ಲೇಖಿಸಿ, ಹಸಿರು ಉಪಕ್ರಮಗಳಿಗೆ "ದೀನದಯಾಳ್ ಬಂದರು ಪ್ರಾಧಿಕಾರದ ನಿರಂತರ ಬದ್ಧತೆಯನ್ನು ಅವರು ಶ್ಲಾಘಿಸಿದರು.

><><><><>***<><><><><

ಗ್ರಿಸ್ ನ ಎಥೆನ್ಸ್ ನಲ್ಲಿ ನಡೆಯುತ್ತಿರುವ ೧೭ ವರ್ಷದೊಳಗಿನವರ ವಿಶ್ವ ಕುಸ್ತಿ ಚಾಂಪಿಯನ್‌ಶಿಪ್ ನಲ್ಲಿ ಭಾರತೀಯ ಮಹಿಳಾ ಕುಸ್ತಿ ಪಟುಗಳು ಉತ್ತಮ ಪ್ರದರ್ಶನ ನೀಡುತ್ತಿದ್ದು, ನಿನ್ನೆ ನಡೆದ ವಿವಿಧ ವಿಭಾಗಗಳ ತಂಡಗಳಲ್ಲಿ ೨ ಚಿನ್ನ, ೨ ಬೆಳ್ಳಿ ಹಾಗೂ ೧ ಕಂಚಿನ ಪದಕಗಳೊಂದಿಗೆ ಒಟ್ಟು ೫ ಪದಕಗಳನ್ನು ಭಾರತ ತನ್ನದಾಗಿಸಿಕೊಂಡಿದೆ. ಮಹಿಳಾ ೪೩ ಕೆ.ಜಿ. ಫ್ರಿ ಸ್ಟೈಲ್ ವಿಭಾಗದಲ್ಲಿ ಭಾರತದ ರಚನಾ ಭಾರತದ ಮೊದಲ ಚಿನ್ನದ ಪದಕವನ್ನು ತಂದುಕೊಟ್ಟರು. ೬೫ ಕೆ.ಜಿ. ವಿಭಾಗದಲ್ಲಿ ಅಶ್ವಿನಿ ವಿಸ್ಮಯ್ ಚಿನ್ನ , ೫೭ ಕೆ.ಜಿ. ವಿಭಾಗದಲ್ಲಿ ಮೋನಿ ಹಾಗೂ ೭೩ ಕೆ.ಜಿ. ವಿಭಾಗದಲ್ಲಿ ಕಾಜಲ್ ಬೆಳ್ಳಿ ಪದಕ , ೪೯ ಕೆ.ಜಿ. ವಿಭಾಗದಲ್ಲಿ ಕೋಮಲ್ ವರ್ಮ ಕಂಚಿನ ಪದಕ ಗೆದ್ದಿದ್ದಾರೆ.

><><><><>***<><><><><